

ಚಿತ್ರ: ಎಸ್.ಆರ್.ಮಧುಸೂದನ್

ಎಂಬುದಕ್ಕೆ ಎರಡು ಮೂರು ಮುಖ್ಯ ಕಾರಣಗಳನ್ನು ಅವಲೋಕಿಸಬಹುದು.

ಹುಲಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳುವುದಕ್ಕಿಂತ, ಹುಲಿಗಳು ಮರಿ ಹಾಕಿದರೆ, ಅವು ಸಾಯದೇ ಉಳಿದುಕೊಳ್ಳುವುದು ಹೆಚ್ಚಾಗಿದೆ ಎನ್ನುವುದು ಮುಖ್ಯ ಅಂಶ. ಒಂದು ಹುಲಿ ನಾಲ್ಕು ಮರಿ ಹಾಕಿದರೆ, ಅರಣ್ಯ ಪರಿಸರ ಚೆನ್ನಾಗಿ ಇಲ್ಲದೇ ಇದ್ದರೆ, ಒಂದೇ ಮರಿ ಉಳಿದುಕೊಳ್ಳಬಹುದು ಅಥವಾ ಎಲ್ಲಾ ಸತ್ತು ಹೋಗಬಹುದು. ಚೆನ್ನಾಗಿದ್ದರೆ, ನಾಲ್ಕೂ ಉಳಿದುಕೊಳ್ಳಬಹುದು. ಈಗ ಆಹಾರ ಚೆನ್ನಾಗಿ ಸಿಗುತ್ತಿದೆ, ಹಾಗಾಗಿ ನಾಲ್ಕೂ ಮರಿಗಳೂ ಉಳಿದುಕೊಳ್ಳುತ್ತಿವೆ ಎಂದು ಅಂದುಕೊಳ್ಳಬೇಕಷ್ಟೇ.

ಈಗ ಬಂಡೀಪುರದಲ್ಲಿ ಹದಿನೈದು ಹೆಣ್ಣು ಹುಲಿಗಳಿವೆ ಎಂದಿಟ್ಟುಕೊಂಡರೆ, ಅವು ನಾಲ್ಕು ನಾಲ್ಕು ಮರಿ ಹಾಕಿದರೂ ಎರಡು ವರ್ಷದಲ್ಲಿ 60 ಹುಲಿಗಳು ಹೆಚ್ಚಾದಂತೆ ಆಗುತ್ತವೆ. ಹೀಗೆ ಸಂಖ್ಯೆ ಹೆಚ್ಚಾದಲ್ಲಿ, ಅವಕ್ಕೆ ಜಾಗ ಎಲ್ಲಿ ಸಿಗುತ್ತದೆ? ಆಗ ಅವು ಹೊಸ ಜಾಗವನ್ನು ಹುಡುಕುವ ಪ್ರಯತ್ನ ಮಾಡಿ ಅಲ್ಲಿ ಸಾಮ್ರಾಜ್ಯ ಕಟ್ಟಿಕೊಳ್ಳಲು ಹೊರಡುತ್ತವೆ. ಅದೊಂದು ಸಹಜ ಪ್ರಕ್ರಿಯೆ. ಒಳಗೆ ಜಾಗವಿಲ್ಲದೇ, ಆಚೆ ಬರಲೇಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಇದರಿಂದಾಗಿ, ಮಾನವನ ಜತೆಗೆ ಸಂಘರ್ಷ ಶುರುವಾಗುತ್ತದೆ.

ಈ ರೀತಿ ಹೊಸ ಜಾಗವನ್ನು ಹುಡುಕುವ ಹುಲಿಗಳ ಪ್ರಯತ್ನದಲ್ಲಿ ಅವು ಕಾಫಿ ತೋಟಗಳಿಗೆ ಹೋಗಬಹುದು, ಮತ್ತೊಂದು ಜಾಗ ಹುಡುಕಲು ಪ್ರಯತ್ನಿಸಬಹುದು. ಅಲ್ಲಿ ಸಾಕು ಪ್ರಾಣಿಗಳನ್ನು ಹಿಡಿಯಬಹುದು. ಕೆಲವೊಮ್ಮೆ ಎದುರಾದ ಮನುಷ್ಯನ ಮೇಲೂ ಎರಗಿ ಗಾಯಗೊಳಿಸಬಹುದು.

ಕಾಡಿಗೆ ಅಂಟಿಕೊಂಡಿರುವ ಕೊಡಗಿನ ಕಾಫಿ ತೋಟಕ್ಕೆ ಹುಲಿ

